**2ನೇ ಅಪರ ನ್ಯಾಯಿಕ ದಂಡಾಧಿಕಾರಿ ಮತ್ತು ಜೆಎಂಎಫ್‌ಸಿ ನ್ಯಾಯಾಲಯ ಮಾಗಡಿ**

**ಕ್ರಿಮಿನಲ್ ಪ್ರಕರಣ ಸಂಖ್ಯೆ - 2630/2024**

**ಚಾಸಾ - 01 /** ಪ್ರಾಸಾ **- 02**

| | |
|---|---|
| ಹೆಸರು | **ವಿನೋದ್ ಕುಮಾರ್** |
| ತಂದೆಯ ಹೆಸರು | **ನರಸೇಗೌಡ** |
| ವಯಸ್ಸು | **50** |
| ಉದ್ಯೋಗ | ವ್ಯಾಪಾರ |
| ವಿಳಾಸ | **ಬೆಂಗಳೂರು** |

**ದಿನಾಂಕಃ 30-01-2026 ರಂದು** ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆ:- ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕ ರವರಿಂದಃ-**

ದಿಃ16.03.2024ರಂದು ಸರ್ವೆ ನಂ.13ರಲ್ಲಿ ಇರುವ ಸೈಟ್ ನಂ.13 ಕ್ಕೆ ಆರೋಪಿಗಳು ಅತಿಕ್ರಮ ಪ್ರವೇಶ ಮಾಡಿರುತ್ತಾರೆ. ಅದನ್ನು ನಾನು ಕೇಳಿದಾಗ ನನಗೆ ಅವಾಚ್ಯ ಶಬ್ದಗಳಿಂದ ಬೈದರು ಮತ್ತು ಕೈಗಳಿಂದ ಹಲ್ಲೆ ಮಾಡಿರುತ್ತಾರೆ. ಸದರಿ ವಿಷಯಕ್ಕೆ ಸಂಬಂಧಿಸಿದಂತೆ ನಾನು ಪೋಲೀಸ್ ಠಾಣೆಗೆ ದೂರನ್ನು ನೀಡಿರುತ್ತೇನೆ. ಈಗ ಸಾಕ್ಷಿಗೆ ದೂರನ್ನು ತೋರಿಸಿದ್ದು, ಅದರಲ್ಲಿರುವ ತನ್ನ ಸಹಿಯನ್ನು ಸಾಕ್ಷಿಯು ಗುರುತಿಸಿರುತ್ತಾರೆ. ದೂರನ್ನು ನಿಪಿ-3 ಎಂದು ಮತ್ತು ಸಾಕ್ಷಿಯ ಸಹಿಯನ್ನು ನಿಪಿ-3(ಎ) ಎಂದು ಗುರುತಿಸಲಾಯಿತು.

ನಿಪಿ-1ರ ಆದಾರದ ಮೇಲೆ, ಅದೇ ದಿನದಂದು ಪೋಲೀಸರು ಪಂಚನಾಮೆಯನ್ನು ಮಾಡಿದರು. ಈಗ ಸಾಕ್ಷಿಗೆ ಪಂಚನಾಮೆಯನ್ನು ತೋರಿಸಿದ್ದು, ಅದರಲ್ಲಿರುವ ತನ್ನ ಸಹಿಯನ್ನು ಸಾಕ್ಷಿಯು ಗುರುತಿಸಿರುತ್ತಾರೆ. ಪಂಚನಾಮೆಯನ್ನು ನಿಪಿ-4 ಎಂದು ಮತ್ತು ಸಾಕ್ಷಿಯ ಸಹಿಯನ್ನು ನಿಪಿ-4(ಎ) ಎಂದು ಗುರುತಿಸಲಾಯಿತು. ನಿಪಿ-4ಕ್ಕೆ ನನ್ನ ಜೊತೆ ಚಾಸಾ-2 ಮತ್ತು 3ರವರು ಸಹಿಯನ್ನು ಮಾಡಿರುತ್ತಾರೆ. ನಾನು ಆರೋಪಿಗಳನ್ನು ನೋಡಿದರೆ ಗುರುತಿಸುತ್ತೇನೆ.

ಇಂದು ನ್ಯಾಯಾಲಯದ ಮುಂದೆ 1 ಮತ್ತು 2ನೇ ಆರೋಪಿಗಳು ಹಾಜರಿದ್ದಾರೆ. 3ನೇ ಆರೋಪಿಯನ್ನು ಗುರುತಿಸುವಲ್ಲಿ ಆರೋಪಿಗಳ ಪರ ವಕೀಲರಿಂದ ಯಾವುದೇ ತಕರಾರು ಇರುವುದಿಲ್ಲ. ಈ ಪ್ರಕರಣಕ್ಕೆ ಸಂಬಂಧಿಸಿದಂತೆ ನಾನು ಮರು ಹೇಳಿಕೆಯನ್ನು ನೀಡಿದ್ದೇನೆ.

**ಈ ಹಂತದಲ್ಲಿ ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ, ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು, ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕರ ಮನವಿಯನ್ನು ಪುರಸ್ಕರಿಸಿ, ಪಾಟೀ ಸವಾಲು ಮಾಡಲು ಅನುಮತಿ ನೀಡಲಾಯಿತು. ನಾನು ಮತ್ತು ಅವರು ಪುರಸ್ಕರಿಸಿ ಪಾಟೀ ಸವಾಲು ಮಾಡಲು ಅನುಮತಿ ನೀಡಲಾಯಿತು.**

**ಪಾಟೀ ಸವಾಲು:- ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕ ರವರಿಂದ:-**

ಹೊನಗನಹಟ್ಟಿ ಗ್ರಾಮದ ಆಶ್ರಯ ಯೋಜನೆ ಯಲ್ಲಿ 1972ರಲ್ಲಿ ಸುವರ್ಣಮ್ಮ ಕೋಂ ನರಸಿಂಹಮೂರ್ತಿ ರವರ ಹೆಸರಿಗೆ ನಿವೇಶನ ಸಂ.13ರಲ್ಲಿ 30x 50ಅಡಿಗಳು ಸರ್ಕಾರದಿಂದ ನೀಡಿರುತ್ತಾರೆ ಎಂದರೆ ಸಾಕ್ಷಿಯು ಹೌದು ಎನ್ನುತ್ತಾರೆ. 1989ನೇ ಇಸವಿಯಲ್ಲಿ ಸುವರ್ಣಮ್ಮ ರವರು ಪದ್ಮ ಹಾಗೂ ರಾಘವೇಂದ್ರರಾವ್ ರವರಿಗೆ ಜಂಟಿಯಾಗಿ ಕ್ರಯಕ್ಕೆ ನೀಡಿರುತ್ತಾರೆ ಎಂದರೆ ಸಾಕ್ಷಿಯು ಹೌದು ಎನ್ನುತ್ತಾರೆ. 2012ನೇ ಇಸವಿಯಲ್ಲಿ ಮೇಲ್ಕಂಡ ಸ್ವತ್ತನ್ನು ಸುವರ್ಣಮ್ಮ ರವರು ಪುನಃ ಕೆ. ನಾಗೇಶ್ವರ್ ರಾವ್ ರವರಿಗೆ 2ನೇ ಭಾರಿಗೆ ಕ್ರಯ ಮಾಡಿರುತ್ತಾರೆ ಎಂದರೆ ಸಾಕ್ಷಿಯು ಹೌದು ಎನ್ನುತ್ತಾರೆ. ಅದೇ ನಿವೇಶವನವನ್ನು ಪದ್ಮ ಮತ್ತು ರಾಘವೇಂದ್ರ ರಾವ್ ರವರು 2016ನೇ ಸಾಲಿನಲ್ಲಿ ಶ್ರೀದರ್ ಎಂಬುವವರಿಗೆ ಕ್ರಯ ಮಾಡಿ ಕೊಟ್ಟಿರುತ್ತಾರೆ ಎಂದರೆ ಸಾಕ್ಷಿಯು ಹೌದು ಎನ್ನುತ್ತಾರೆ. ಶ್ರೀಧರ್ ಮತ್ತು ನಾಗೇಶ್ವರ್ ರಾವ್ ರವರು 2017ನೇ ಸಾಲಿನಲ್ಲಿ ನಿಮಗೆ ಶುದ್ದ ಕ್ರಯ ಮಾಡಿತಿಕೊಟ್ಟಿರುತ್ತಾರೆ ಮತ್ತು 2018ನೇ ಸಾಲಿನಲ್ಲಿ ಸುವರ್ಣಮ್ಮ ರವರು ಒಪ್ಪಿಗೆ ಪತ್ರ ನೀಡಿದ್ದು, ಅದರಂತೆ ನಿವೇಶನ ಸಂ.13 ನಿಮಗೆ ಸೇರಿದ್ದು ಅನುಭವಿಸಿಕೊಂಡು ಹೋಗತಕ್ಕದ್ದು ಎಂದು ತಾವರೇಕೆರೆ ಉಪ ನೋಂದಣಾಧಿಕಾರಿಯ ಕಛೇರಿಯಲ್ಲಿ ಒಪ್ಪಿ ಗೆ ಪತ್ರ ಸಾಕ್ಷಿ ನೀಡಿದ್ದು, ನೊಂದಣಿ ಮಾಡಿಸಿಕೊಂಡಿರುತ್ತೀರಾ ಎಂದರೆ ಸಾಕ್ಷಿಯು ಹೌದು ಎನ್ನುತ್ತಾರೆ.

2. 2018ನೇ ಸಾಲಿನಲ್ಲಿ ಸದರಿ ನಿವೇಶನಕ್ಕೆ ಹೋಗಲು 1ನೇ ಆರೋಪಿಯು ತೊಂದರೆ ನೀಡಿದಕ್ಕೆ ನೀವು ಕೇಸನ್ನು ಹಾಕಿರುತ್ತೀರಾ ಮತ್ತು ಅದೇ ನಿವೇಶನಕ್ಕೆ ಸಂಬಂಧಿಸಿದಂತೆ 1ನೇ ಆರೋಪಿಯ ಮೇಲೆ ಸಿ.ಸಿ.ಸಂ.920/2020ರಂತೆ ಮಾಗಡಿ ನ್ಯಾಯಾಲಯದಲ್ಲಿ ಪ್ರಕರಣ ನಡೆಯುತ್ತಿದೆ ಎಂದರೆ ಸಾಕ್ಷಿಯು ಹೌದು ಎನ್ನುತ್ತಾರೆ. ಇದರ ಆದಾರದ ಮೇಲೆ ಮಾಗಡಿಯ ನ್ಯಾಯಾಲಯದಲ್ಲಿ ಓ. ಎಸ್ ಸಂ. 162/2018ರಂತೆ ದಾವೆಯನ್ನು ಹಾಕಿದ್ದು, ಮತ್ತು ನಿಮ್ಮ ಹೆಸರಿಗೆ 2021ನೇ ಇಸವಿಯ ಜನವರಿ ತಿಂಗಳಿನಲ್ಲಿ ಡಿಕ್ರಿ ಆಗಿರುತ್ತದೆ ಎಂದರೆ ಸಾಕ್ಷಿಯು ಹೌದು ಎನ್ನುತ್ತಾರೆ.

3. ದಿಃ16.03.2024ರಂದು ರಾತ್ರಿ 11.30ರ ಸಮಯದಲ್ಲಿ ಆರೋಪಿಗಳು ನಿಮಗೆ ಸೇರಿದ ನಿವೇಶನ ಸಂ.13ರಲ್ಲಿ ಕಾಂಪೌಂಡ್ ಬೀಗ ಹೊಡೆದು ಹಾಕಿ ಒಳಗೆ ನುಗ್ಗಿದ್ದರು ಎಂದರೆ ಸಾಕ್ಷಿಯು ಹೌದು ಎನ್ನುತ್ತಾರೆ. ಅದನ್ನು ನೀವು ಕೇಳಿದಾಗ ಆರೋಪಿಗಳು ಮತ್ತು ಅವರ ಜೊತೆ 15 ಜನರನ್ನು ಕರೆಸಿಕೊಂಡು ಅವಾಚ್ಯ ಶಬ್ದಗಳಿಂದ ಬೈದರು ಮತ್ತು ಕೈಗಳಿಂದ ಹೊಡೆದು ಗುಂಡಾಗಿರಿ ಮಾಡಿರುತ್ತಾರೆ ಎಂದರೆ ಸಾಕ್ಷಿಯು ಹೌದು ಎನ್ನುತ್ತಾರೆ. ದಿಃ 10.04.2024ರಂದು ನೀವು ನಿಮ್ಮ ಮರು ಹೇಳಿಕೆಯಲ್ಲಿ ಆರೋಪಿಗಳು ನಿಮಗೆ ಸದರಿ ನಿವೇಶನ ವಿಚಾರಕ್ಕೆ ಬಂದರೆ ಕೊಲೆ ಮಾಡುವುದಾಗಿ ಬೆದರಿಕೆ ಹಾಕಿದರು ಎಂದರೆ ಸಾಕ್ಷಿಯು ಹೌದು ಎನ್ನುತ್ತಾರೆ. ನೀವು ಯಾವುದೇ ಆಸ್ಪತ್ರೆಯಲ್ಲಿ ಚಿಕಿತ್ಸೆಯನ್ನು ಪಡೆದುಕೊಂಡಿರುವುದಿಲ್ಲ ಮತ್ತು ಆರೋಪಿಗಳ ಜೊತೆ ಬಂದವರು ಯಾರು ನಿಮಗೆ ಗೊತ್ತಿಲ್ಲ ಎಂದು ಹೇಳಿರುತ್ತೀರಾ ಎಂದರೆ ಸಾಕ್ಷಿಯು ಹೌದು ಎನ್ನುತ್ತಾರೆ.

ಪಾಟೀ **ಸವಾಲುಃ- ಆರೋಪಿಗಳ ಪರ ಶ್ರೀ. ಎಂ.ಎಸ್.ಎಸ್ , ವಕೀಲರಿಂದಃ-**

ಮಾನ್ಯ ಎಪಿಪಿ ರವರು ತಮ್ಮ ಪಾಟಿ ಸವಾಲಿನಲ್ಲಿ ನಿಪಿ-3ರಲ್ಲಿ ಇರುವ ವಿಷಯವನ್ನು ನಿಮಗೆ ಹೇಳುವ ತನಕ ನಿಮಗೆ ಅದರ ಬಗ್ಗೆ ಗೊತ್ತಿರಲಿಲ್ಲ ಎಂದರೆ ಸಾಕ್ಷಿಯು ಸರಿಯಲ್ಲ ಎನ್ನುತ್ತಾರೆ. ನಿಪಿ-3ರಲ್ಲಿ ನೀವು ನಿವೇಶನ ಸಂ.13ಕ್ಕೆ ಸಂಬಂಧಿಸಿರುವ ಪಂಚಾಯಿತಿ ಸಂಖ್ಯೆಯನ್ನು ನಮೂದಿಸಿರುವುದಿಲ್ಲ ಎಂದರೆ ಸಾಕ್ಷಿಯು ಹೌದು ಎನ್ನುತ್ತಾರೆ. 1972ರಲ್ಲಿ ಸುವರ್ಣಮ್ಮ ರವರ ಹೆಸರಿಗೆ ನಿವೇಶನ ಸಂ.13 ಸರ್ಕಾರದಿಂದ ಮಂಜೂರು ಆಗಿರುತ್ತದೆ ಮತ್ತು ಅದಕ್ಕೆ ಸಂಬಂಧಿಸಿದಂತೆ ಅವರ ಹೆಸರಿಗೆ

ಖಾತೆ ಆಗಿತ್ತು ಎಂದರೆ ಸಾಕ್ಷಿಯು ಹೌದು ಎನ್ನುತ್ತಾರೆ. ಸದರಿ ಖಾತೆಯು ತಾವರಕೆರೆ ಪಂಚಾಯಿತಿಯಿಂದ ಆಗಿರುತ್ತದೆ ಮತ್ತು ಅದರ ಸಂಖ್ಯೆ ನನಗೆ ಗೊತ್ತಿಲ್ಲ. ನಾಗೇಶ್ವರ್ ರಾವ್ ಮತ್ತು ಪದ್ಮ ಮತ್ತು ರಾಘವೇಂದ್ರ ರಾವ್ ಹೆಸರಿಗೆ ಆಗಿರುವ ನಿವೇಶನದ ಖಾನೇಷುಕುಮಾರಿ ಸಂಖ್ಯೆ ನನಗೆ ಗೊತ್ತಿಲ್ಲ. ಶ್ರೀಧರ್ ರವರು ಖರೀದಿ ಮಾಡಿರುವ ಸ್ವತ್ತಿನ ಖಾನೇಷುಕುಮಾರಿ ಸಂಖ್ಯೆ ನನಗೆ ಗೊತ್ತಿಲ್ಲ. ನಾನು ಖರೀದಿ ಮಾಡಿರುವ ಸ್ವತ್ತಿನ ಖಾನೇಷುಕುಮಾರಿ ಸಂಖ್ಯೆ ನನಗೆ ಗೊತ್ತಿಲ್ಲ.

2. ಈ ಮೇಲೆ ಹೇಳಿರುವ ವ್ಯಕ್ತಿಗಳ ಹೆಸರಿನಲ್ಲಿ ಖಾತೆಯನ್ನು ಮಾಡುವ ಮೊದಲೇ ಮುನಿರಾಜು ರವರ ಹೆಸರಿಗೆ ಖಾತೆ ಆಗಿತ್ತು ಎಂದರೆ ಸಾಕ್ಷಿಯು ಸರಿಯಲ್ಲ ಎನ್ನುತ್ತಾರೆ. ಮುನಿರಾಜು ರವರು ಸದರಿ ಸ್ವತ್ತನ್ನು ಖರೀದಿ ಮಾಡಿದ ನಂತರ ಅವರು ಅಲ್ಲಿಯೇ ಮನೆಯನ್ನು ಕಟ್ಟಿಕೊಂಡು ವಾಸಿಸುತ್ತಿದ್ದಾರೆ ಎಂದರೆ ಸಾಕ್ಷಿಯು ಸರಿಯಲ್ಲ ಎನ್ನುತ್ತಾರೆ. ನೀವು ಎಂದಿಗೂ ಸಹ ಸದರಿ ಸ್ವತ್ತಿನ ಸ್ವಾಧೀನದಲ್ಲಿ ಇರಲಿಲ್ಲ ಎಂದರೆ ಸಾಕ್ಷಿಯು ಸರಿಯಲ್ಲ ಎನ್ನುತ್ತಾರೆ. ನಿಪಿ-3ರಲ್ಲಿ ನೀವು ಆರೋಪಿಗಳು ನಿಮಗೆ ಅವಾಚ್ಯ ಶಬ್ದಗಳಿಂದ ಬೈದಿಲ್ಲ ಮತ್ತು ಹೊಡೆದಿಲ್ಲ ಎಂದು ಹೇಳಿರುತ್ತೀರಾ ಎಂದರೆ ಸಾಕ್ಷಿಯು ಸರಿಯಲ್ಲ ಎನ್ನುತ್ತಾರೆ. ಅರೋಪಿಗಳ ಜೊತೆ ಬಂದಿದ್ದ 15 ಜನರು ಯಾರು ನನಗೆ ಗೊತ್ತಿಲ್ಲ. ಆರೋಪಿಗಳು ಹೊಡೆದು ಹಾಕಿದ್ದ ಗೇಟಿನ ಬೀಗ ಏನಾಯಿತು ಎಂದು ನನಗೆ ಗೊತ್ತಿಲ್ಲ.

3. ನಿಪಿ-4ರಂತೆ ಪಂಚಾನಮೆ ಮಾಡುವ ಸಮಯದಲ್ಲಿ ಸದರಿ ಬೀಗ ಅಲ್ಲಿ ಇರಲಿಲ್ಲ. ಪೋಲೀಸರು ಸ್ಥಳಕ್ಕೆ ಬಂದಿಲ್ಲ ಮತ್ತು ನಿಪಿ-4ರಂತೆ ಪಂಚನಾಮೆಯನ್ನು ಮಾಡಿರುವುದಿಲ್ಲ ಎಂದರೆ ಸಾಕ್ಷಿಯು ಸರಿಯಲ್ಲ ಎನ್ನುತ್ತಾರೆ. ನಿಪಿ-3ರಂತೆ ನಾನು ದೂರನ್ನು ನೀಡಿದ ನಂತರ ದಿಃ10.04.2024ರಂದು ನಾನು ನನ್ನ ಹೇಳಿಕೆಯನ್ನು ನೀಡಿರುತ್ತೇನೆ. ಪೋಲೀಸರು ಸ್ಪಷ್ಟೀಕರಣ ಮಾಡಬೇಕು ಎಂದು ಹೇಳಿದ ಕಾರಣ ನಾನು ನನ್ನ ಹೇಳಿಕೆಯನ್ನು ನೀಡಿರುತ್ತೇನೆ. ನನಗೆ ಚಾಸಾ-4ರವರು ಯಾರು ಎಂದು ಗೊತ್ತಿಲ್ಲ. ಪಂಚನಾಮೆಯನ್ನು ಮಾಡುವ ಸಮಯದಲ್ಲಿ ಪೋಲೀಸರು ಬರೆದುಕೊಂಡಿರುತ್ತಾರೆ. ಸದರಿ ಬರವಣಿಗೆಯನ್ನು ಕೈಯಲ್ಲಿ ಮಾಡಲಾಗಿದೆ. ಸದರಿ ಕೈ ಬರಹದ ಪಂಚನಾಮೆಗೆ ಯಾರು ಸಹಿಯನ್ನು ಮಾಡಿದರು ಎಂದರೆ ಸಾಕ್ಷಿಯು ತಾನು, ಚಾಸಾ-2 ಮತ್ತು 3 ರವರು

ಸಹಿಯನ್ನು ಮಾಡಿದ್ದಾರೆ ಎನ್ನುತ್ತಾರೆ. ಚಾಸಾ-2 ಮತ್ತು 3 ರವರು ಸ್ಥಳಕ್ಕೆ ಬಂದಿಲ್ಲ ಮತ್ತು ಯಾವುದೇ ಪಂಚನಾಮೆಗೆ ಅವರ ಸಹಿಯನ್ನು ಮಾಡಿಲ್ಲ ಎಂದರೆ ಸಾಕ್ಷಿಯು ಸರಿಯಲ್ಲ ಎನ್ನುತ್ತಾರೆ. ಆರೋಪಿಗಳು ನಿಮಗೆ ಅವಾಚ್ಯ ಶಬ್ದಗಳಿಂದ ಬೈದಿಲ್ಲ, ಹೊಡೆದಿಲ್ಲ ಮತ್ತು ಕೊಲೆ ಬೆದರಿಕೆ ಹಾಕಿಲ್ಲ ಎಂದರೆ ಸಾಕ್ಷಿಯು ಸರಿಯಲ್ಲ ಎನ್ನುತ್ತಾರೆ. 2ನೇ ಆರೋಪಿಗೆ ಸೇರಿರುವ ಸ್ವತ್ತನ್ನು ಕಬಳಿಸಬೇಕು ಎಂಬ ಉದ್ದೇಶದಿಂದ ನಿಪಿ-3ರಂತೆ ಸುಳ್ಳು ದೂರನ್ನು ನೀಡಿ ಸುಳ್ಳು ಸಾಕ್ಷಿ ಹೇಳುತ್ತಿದ್ದೀರಾ ಎಂದರೆ ಸಾಕ್ಷಿಯು ಸರಿಯಲ್ಲ ಎನ್ನುತ್ತಾರೆ.

**ಮರು ವಿಚಾರಣೆ- ಇರುವುದಿಲ್ಲ.**

**ಓ. ಹೇ. ಕೇ. ಸ. ಇ. ಎ. ಒಪ್ಪಿರುತ್ತಾರೆ,**

**2ನೇ ಅ. ನ್ಯಾ. ದಂ. ಮತ್ತು ಜೆಎಂಎಫ್‌ಸಿ, ಮಾಗಡಿ.**